**SC No. 110/20217**
**PW-36**

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

## ಎಸ್. ಸಿ. 110/2017

| ಸಾಕ್ಷಿದಾರರ ಹೆಸರು | ಮಹೇಶ | ಪ್ರಮಾಣ ವಚನ ಮಾಡಿದ |
|---|---|---|
| ತಂದೆಯ/ಗಂಡನ ಹೆಸರು | ಮಹದೇವು | ದಿನಾಂಕ: 03.12.2025 |
| ವಯಸ್ಸು | 42 ವರ್ಷ | |
| ವೃತ್ತಿ | ಪೇಪರ್ ಏಜೆಂಟ್ | ಪ್ರಾ.ಸಾಃ 36 |
| ವಾಸ ಸ್ಥಳ | ವಿಜಯನಗರ, ಮೈಸೂರು | ಚಾ.ಸಾಃ 58 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ಕಳೆದ 25 ವರ್ಷಗಳಿಂದ ಪೇಪರ್ ಏಜೆಂಟ್ ಕೆಲಸ ಮಾಡಿಕೊಂಡಿರುತ್ತೇನೆ. ನನ್ನ ಮೊಬೈಲ್ ಫೋನ್ ನಂಬರ್ 9902208586 ಇರುತ್ತದೆ. ಸದರಿ ನಂಬರ್ ಅನ್ನು ಕಳೆದ 26-27 ವರ್ಷಗಳಿಂದ ಬಳಸುತ್ತಿರುತ್ತೇನೆ. ಈಗಲೂ ಸಹ ಅದೇ ನಂಬರ್ ಅನ್ನು ಬಳಸುತ್ತಿದ್ದೇನೆ. ನಾನು ಈಗ ವಿಸಿ ಮುಖಾಂತರ ಹಾಜರುಪಡಿಸಿರುವ ಪಡುವಾರಹಳ್ಳಿಯ ಆರೋಪಿ ಮಂಜೇಶ್ ನನಗೆ ಪರಿಚಯ ಇರುವುದಿಲ್ಲ. ಈ ಪ್ರಕರಣ ಆರೋಪಿತರ ಮೇಲೆ ಯಾವ ಕಾರಣಕ್ಕಾಗಿ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಈಗ್ಗೆ 2-3 ವರ್ಷಗಳ ಹಿಂದೆ ಪೊಲೀಸರು ನನಗೆ ಪೊಲೀಸ್ ಠಾಣೆಗೆ ಬರುವಂತೆ ತಿಳಿಸಿದ್ದರು ನಾನು ಆ ಪ್ರಕಾರ ಪೊಲೀಸ್ ಠಾಣೆಗೆ ಹೋಗಿದ್ದೆ. ನನಗೆ ಸಹಿ ಮಾಡು ಅಂತ ಹೇಳಿದ್ದರು ನಾನು ಸಹಿ ಮಾಡಿದ್ದೆ. ಯಾವ ಕಾರಣಕ್ಕಾಗಿ ಸಹಿ

ತೆಗೆದುಕೊಳ್ಳುತ್ತಿದ್ದೇವೆ ಎನ್ನುವ ಬಗ್ಗೆ ನನಗೆ ಹೇಳಲಿಲ್ಲ ಸಹಿ ಮಾಡುವಂತೆ ಮಾತ್ರ ಹೇಳಿದ್ದರು ಆದ್ದರಿಂದ ಸಹಿ ಮಾಡಿದ್ದೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೊಲೀಸಿನವರು ನನ್ನ ಹೇಳಿಕೆ ತೆಗೆದುಕೊಂಡಿರುವುದಿಲ್ಲ. ಪೊಲೀಸರು ಮೈಸೂರು ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಿದ್ದರು ನಾನು ಹೇಳಿಕೆಯನ್ನು ಕೊಟ್ಟಿರುವುದಿಲ್ಲ ಆದರೆ ಪೊಲೀಸರು ಸಹಿ ಮಾಡಿಸಿಕೊಂಡಿದ್ದರು. ನನಗೆ ನ್ಯಾಯಾಲಯದ ಮುಂದೆ ಹಾಜರಿರುವ ಯಾವುದೇ ಆರೋಪಿತರು ಗೊತ್ತಿರುವುದಿಲ್ಲ. ನಾನು ಈಗ ನೋಡುತ್ತಿರುವ ಸಹಿ ನನ್ನ ಸಹಿ ಇರುತ್ತದೆ. ಸಾಕ್ಷಿದಾರರು ದಂಡ ಪ್ರಕ್ರಿಯಾ ಸಂಹಿತೆ ಕಲಂ 164 ರ ಹೇಳಿಕೆ ಮೇಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ-124** ಎಂದು ಸಾಕ್ಷಿದಾರರ ಸಹಿಯನ್ನು **ನಿಪಿ-124(ಎ)** ಎಂದು ಗುರುತಿಸಲಾಯಿತು. ನಿಪಿ-124 ಕ್ಕೆ ನ್ಯಾಯಾಧೀಶರ ಮುಂದೆ ನನ್ನ ಸಹಿ ತೆಗೆದುಕೊಂಡಿದ್ದರು. ಪೊಲೀಸರು ನನಗೆ ಸಹಿ ಮಾಡು ಎಂದು ಹೇಳಿದ್ದರಿಂದ ನಿಪಿ-124 ಕ್ಕೆ ಸಹಿ ಮಾಡಿದ್ದೆ. ನಿಪಿ-124 ರಲ್ಲಿ ಏನು ಬರೆದುಕೊಂಡಿರುತ್ತದೆ ಎನ್ನುವ ಬಗ್ಗೆ ಮಾಹಿತಿ ಇರುವುದಿಲ್ಲ.

**ಈ ಹಂತದಲ್ಲಿ , ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ಚಿಕ್ಕಣ್ಣ ಎಂಬುವರು ನನಗೆ ಚಿಕ್ಕಪ್ಪನಾಗಲೀ ದೊಡ್ಡಪ್ಪನಾಗಲೀ ಇರುವುದಿಲ್ಲ. ವಿಸಿ ಮೂಲಕ ಹಾಜರುಪಡಿಸಿರುವ 10 ನೇ ಆರೋಪಿ ಮಂಜೇಶ್ ನನಗೆ ತಮ್ಮನಾಗಬೇಕು ಎಂದರೆ ಸರಿಯಲ್ಲ.

ಪೊಲೀಸಿನವರು ನ್ಯಾಯಾಧೀಶರ ಮುಂದೆ ನನ್ನನ್ನು ಹಾಜರುಪಡಿಸಿದಾಗ ನ್ಯಾಯಾಧೀಶರು ನನ್ನನ್ನು ಕೇಳಿದ್ದು ನಾನೇ ಸ್ವತಃ 124 ರಲ್ಲಿ ಹೇಳಿರುವಂತಹ ವಿಷಯವನ್ನು ಹೇಳಿದ್ದೆ ಎಂದರೆ ಸರಿಯಲ್ಲ. ನನಗೆ ನ್ಯಾಯಾಧೀಶರು ಏನನ್ನು ಕೇಳಿರಲಿಲ್ಲ. ನಾನು ಯಾರದೇ ಒತ್ತಡಕ್ಕೆ ಮಣಿಯದೇ ಸ್ವ ಇಚ್ಚೆಯಿಂದ ಹೇಳಿಕೆ ನೀಡುತ್ತಿದ್ದೇನೆ ಎನ್ನುವ ಬಗ್ಗೆ ಕಾತರಿ ಮಾಡಿಕೊಂಡು ನಾನು ಕೊಟ್ಟಂತಹ ಹೇಳಿಕೆಯ ಪ್ರಕಾರ ನಿಪಿ-124 ರಂತೆ ಹೇಳಿಕೆಯನ್ನು ಬೆರಳಚ್ಚು ಮಾಡಿಸಿದ್ದರು ಎಂದರೆ ಸರಿಯಲ್ಲ. ನ್ಯಾಯಾಧೀಶರ ಮುಂದೆ ನಾನು ಹೇಳಿಕೆಯನ್ನು ಕೊಡುವಾಗ ಯಾವುದೇ ಪೊಲೀಸರು ಇರಲಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಸಿಬ್ಬಂದಿಯವರೇ ನನ್ನ ಸಹಿಯನ್ನು ನಿಪಿ-124 ಕ್ಕೆ ತೆಗೆದುಕೊಂಡಿದ್ದರು ಎಂದರೆ ಸರಿಯಲ್ಲ. 10 ನೇ ಆರೋಪಿ ನನಗೆ ತಮ್ಮನಿದ್ದು ನಾನು ನ್ಯಾಯಾಧೀಶರ ಮುಂದೆ ಹೇಳಿಕೆ ಕೊಡುವ ಪೂರ್ವದಲ್ಲಿಯೇ ನನಗೆ ಫೋನ್ ಮಾಡಿ ಮನೆಯ ಬಗ್ಗೆ ವಿಚಾರ ಮಾಡಿದ್ದೆ ಎಂದರೆ ಸರಿಯಲ್ಲ. ಇದೇ ಕಾರಣಕ್ಕಾಗಿ ಪೊಲೀಸರು ನನ್ನನ್ನು ಆರೋಪಿ ಮಂಜೇಶ ಯಾವ ಕಾರಣಕ್ಕಾಗಿ ನನಗೆ ಫೋನ್ ಮಾಡಿದ್ದ ಎನ್ನುವ ಬಗ್ಗೆ ವಿಚಾರಣೆ ಮಾಡಿದ್ದರು ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಆರೋಪಿ ಮಂಜೇಶ್ ನನಗೆ ತಮ್ಮನಿದ್ದು ಮನೆಯ ವಿಚಾರದ ಬಗ್ಗೆ ಕೇಳಲು ಫೋನ್ ಮಾಡಿದ್ದ ಎಂದು ಹೇಳಿದ್ದೆ ಎಂದರೆ ಸರಿಯಲ್ಲ. ನ್ಯಾಯಾಧೀಶರ ಮುಂದೆಯೂ ಸಹ ನಾನು ಅದೇ ರೀತಿ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ನನಗೆ ಈ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಆರೋಪಿ ಮಂಜೇಶ್ ನನಗೆ ತಮ್ಮನಿರುವುದಂರಿದ ಆತನಿಗೆ ಅನುಕೂಲವಾಗಲೀ ಎನ್ನುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ :**

**ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**